#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–12–09–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : ಹೊರಮಾವು ಕೆರೆಯ(ಸರ್ವೇ ನಂ 83) ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2520/2018

ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಹೊರಮಾವು ಕೆರೆಯು ಬೆಂಗಳೂರು ಪೂರ್ವ ತಾಲ್ಲೂಕು, ಕೆಆರ್ ಪುರ ಹೋಬಳಿ ಹೊರಮಾವು ಗ್ರಾಮದ ಸರ್ವೇ ನಂ 83ರಲ್ಲಿ ಒಟ್ಟು 37 ಎಕರೆ 14 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.

ಕಂದಾಯ ದಾಖಲೆಗಳು ಮತ್ತು ಕೋಳಿವಾಡ ವರದಿಯ ಪ್ರಕಾರ ಹೊರಮಾವು ಕೆರೆಯು 12 ಎಕರೆ 06 ಗುಂಟೆ ವೀಸ್ತೀರ್ಣದಷ್ಟು ಒತ್ತುವರಿಯಾಗಿದೆ. ದಾಖಲೆಗಳನ್ನು ಲಗತ್ತಿಸಲಾಗಿದೆ.

1. ಮಾನ್ಯ ಲೋಕಾಯುಕ್ತರು ಈ ಕೆರೆಯಲ್ಲಿರುವ ಒತ್ತುವರಿಯನ್ನು ಗುರುತು ಮಾಡಿ ತೆರವು ಮಾಡಲು ಭೂದಾಖಲೆಗಳ ಜಂಟಿ ನಿರ್ದೇಶಕರಿಗೆ ನೀಡಿದ ಆದೇಶದಂತೆ ದಿನಾಂಕ 16–10–2018 ರಂದು ಹೊರಮಾವು ಕೆರೆಯನ್ನು ಸರ್ವೇ ಮಾಡಲಾಗಿರುತ್ತದೆ ಹಾಗೂ ಸರ್ವೇ ಕಾರ್ಯ ಮುಗಿದು ಇಂದಿಗೆ 11 ತಿಂಗಳುಗಳು ಕಳೆದಿರುತ್ತದೆ. ಸರ್ವೇ ವರದಿಯನ್ನು ಭೂದಾಖಲೆಗಳ ಜಂಟಿ ನಿರ್ದೇಶಕರು ತಮಗೆ ಸಲ್ಲಿಸಿದ್ದು, ವರದಿಯಲ್ಲಿ ತಿಳಿಸಿರುವ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತೀರಿ. ಆದರೂ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ. ಶೀಘ್ರವಾಗಿ ನಿಗದಿತ ಸಮಯದಲ್ಲಿ ಎಲ್ಲಾ ತರಹದ ಒತ್ತುವರಿಯನ್ನು ತೆರವುಗೊಳಿಸಿ, ಮುಂದೆ ಯಾವುದೇ ಒತ್ತುವರಿಯಾಗದಂತೆ ಕೆರೆಯ ಸುತ್ತ ಸಂಪೂರ್ಣ ತಂತಿ ಬೇಲಿಯನ್ನು ಅಳವಡಿಸಿವುದು ಹಾಗೂ ಕರ್ನಾಟಕ ಭೂ ಕಂದಾಯ ಕಾಯಿದೆ 1964, ಸೆಕ್ಷನ್ 192 ಎ ಮತ್ತು ಬಿ ಪ್ರಕಾರ(ಪ್ರತಿಗಳನ್ನು ಲಗತ್ತಿಸಲಾಗಿದೆ) ಒತ್ತುವರಿದಾರರಿಗೆ ಮತ್ತು ಒತ್ತುವರಿ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲಾ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕಾಗಿ ತಮ್ಮಲ್ಲಿ ಕಳಕಳಿಯಾಗಿ ವಿನಂತಿಸುತ್ತೇವೆ.

2. ಈ ಕೆರೆಗೆ ಕೊಳಚೆ ನೀರು ಹರಿದು ಬರುತ್ತಿದೆ. ಮತ್ತು ಇದನ್ನು ತಡೆಗಟ್ಟಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ವಿನಂತಿಸುತ್ತೇವೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ
ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು

#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–12–09–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : ಹೊರಮಾವು ಅಗರ ಕೆರೆಯ(ಸರ್ವೇ ನಂ 77) ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ

ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2529/2018, ದಿನಾಂಕ –26–06–2019.

ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಹೊರಮಾವು ಅಗರ ಕೆರೆಯು ಬೆಂಗಳೂರು ಪೂರ್ವ ತಾಲ್ಲೂಕು, ಕೆಆರ್ ಪುರ ಹೋಬಳಿ ಹೊರಮಾವು ಅಗರ ಗ್ರಾಮದ ಸರ್ವೇ ನಂ 77ರಲ್ಲಿ ಒಟ್ಟು 51 ಎಕರೆ 34 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.

ಕಂದಾಯ ದಾಖಲೆಗಳು ಮತ್ತು ಕೋಳಿವಾಡ ವರದಿಯ ಪ್ರಕಾರ ಹೊರಮಾವು ಕೆರೆಯು 7 ಎಕರೆ 10 ಗುಂಟೆ ವೀಸ್ತೀರ್ಣದಷ್ಟು ಒತ್ತುವರಿಯಾಗಿದೆ. ದಾಖಲೆಗಳನ್ನು ಲಗತ್ತಿಸಲಾಗಿದೆ.

1. ಮಾನ್ಯ ಲೋಕಾಯುಕ್ತರು ಈ ಕೆರೆಯಲ್ಲಿರುವ ಒತ್ತುವರಿಯನ್ನು ಗುರುತು ಮಾಡಿ ತೆರವು ಮಾಡಲು ಭೂದಾಖಲೆಗಳ ಜಂಟಿ ನಿರ್ದೇಶಕರಿಗೆ ನೀಡಿದ ಆದೇಶದಂತೆ ದಿನಾಂಕ 04–12–2018 ರಂದು ಹೊರಮಾವು ಅಗರ ಕೆರೆಯನ್ನು ಸರ್ವೇ ಮಾಡಲಾಗಿರುತ್ತದೆ ಹಾಗೂ ಸರ್ವೇ ಕಾರ್ಯ ಮುಗಿದು ಇಂದಿಗೆ 09 ತಿಂಗಳುಗಳು ಕಳೆದಿರುತ್ತದೆ. ಸರ್ವೇ ವರದಿಯನ್ನು ಭೂದಾಖಲೆಗಳ ಜಂಟಿ ನಿರ್ದೇಶಕರು ತಮಗೆ ಸಲ್ಲಿಸಿದ್ದು, ವರದಿಯಲ್ಲಿ ತಿಳಿಸಿರುವ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತೀರಿ. ಆದರೂ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ. ಶೀಘ್ರವಾಗಿ ನಿಗದಿತ ಸಮಯದಲ್ಲಿ ಎಲ್ಲಾ ತರಹದ ಒತ್ತುವರಿಯನ್ನು ತೆರವುಗೊಳಿಸಿ, ಮುಂದೆ ಯಾವುದೇ ಒತ್ತುವರಿಯಾಗದಂತೆ ಕೆರೆಯ ಸುತ್ತ ಸಂಪೂರ್ಣ ತಂತಿ ಬೇಲಿಯನ್ನು ಅಳವಡಿಸಿವುದು ಹಾಗೂ ಕರ್ನಾಟಕ ಭೂ ಕಂದಾಯ ಕಾಯಿದೆ 1964, ಸೆಕ್ಷನ್ 192 ಎ ಮತ್ತು ಬಿ ಪ್ರಕಾರ(ಪ್ರತಿಗಳನ್ನು ಲಗತ್ತಿಸಲಾಗಿದೆ) ಒತ್ತುವರಿದಾರರಿಗೆ ಮತ್ತು ಒತ್ತುವರಿ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲಾ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕಾಗಿ ತಮ್ಮಲ್ಲಿ ಕಳಕಳಿಯಾಗಿ ವಿನಂತಿಸುತ್ತೇವೆ.

2. ಈ ಕೆರೆಯಲ್ಲಿ ಖಾಸಗಿ ರಸ್ತೆ ನಿರ್ಮಿಸಲಾಗುತ್ತಿದ್ದು, ಇದನ್ನು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಮತ್ತು ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇವೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ
ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು